## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕಿನ ಅದ್ರಹಳ್ಳಿ ಮತ್ತು ಇತರೆ 37 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ **2022-23ನೇ** ಸಾಲಿನ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

**ಓದಲಾಗಿದೆ:** ಮುಖ್ಯ ಅಭಿಯಂತರರು, ಗ್ರಾ.ಕು.ನೀ&ನೈ. ಇಲಾಖೆ, ಇವರ ಕಡತ ಸಂ:ಗ್ರಾಕುನೀ&ನೈಇ/ಮುಇಂ/ತಾಂತ್ರಿಕ/129/2022-23.

---

**ಪೀಠಿಕೆ:**

ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕಿನ ಅದ್ರಹಳ್ಳಿ ಮತ್ತು ಇತರೆ 37 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ **2022-23ನೇ ಸಾಲಿನ** ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಕಾಮಗಾರಿಗೆ 2021-22ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆ ನೀಡಲಾಗಿದೆ.

ಈ ಯೋಜನೆಯ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆಯ ಅವಶ್ಯಕತೆ ಇರುವುದರಿಂದ **ರೂ.246.00ಲಕ್ಷ** ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ಪ್ರಸ್ತಾವನೆಯನ್ನು ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರು ಮೇಲೆ ಓದಲಾದ ಕಡತದಲ್ಲಿ ಕೋರಿರುತ್ತಾರೆ.

ಚಾಲ್ತಿ ಪಾರದರ್ಶಕ ನೀತಿಯನ್ವಯ, ನಿಯಮಾನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, **ಗದಗ** ಜಿಲ್ಲಾ ಪಂಚಾಯತ್ ಹಾಗೂ ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆರವರು ಮುಂದಿನ ಪ್ರಕ್ರಿಯೆಯನ್ನು ಅನುಸರಿಸಲು ಅನುವಾಗುವಂತೆ ಸದರಿ ಕಾಮಗಾರಿಗೆ **4215-MVS** (ಓ&ಎಂ) ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ:-

**ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀ&ನೈಇ/333/ಗ್ರಾನೀಸ(4)2022 ಬೆಂಗಳೂರು, ದಿನಾಂಕ:05.07.2022.** 927

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ, ಗದಗ ಜಿಲ್ಲೆ, ಶಿರಹಟ್ಟಿ ತಾಲ್ಲೂಕಿನ ಅದ್ರಹಳ್ಳಿ ಮತ್ತು ಇತರೆ 37 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ **2022-23ನೇ** ಸಾಲಿನ ಕಾರ್ಯಾಚರಣೆ ಮತ್ತು ನಿರ್ವಹಣೆ (ಓ&ಎಂ) ಕಾಮಗಾರಿಯ ಅಂದಾಜು ಮೊತ್ತ **ರೂ.246.00ಲಕ್ಷ (ಎರಡು ನೂರ ನಲವತ್ತಾರು ಲಕ್ಷ ರೂಪಾಯಿಗಳು ಮಾತ್ರ)** ಗಳಿಗೆ ಈ ಆದೇಶಕ್ಕೆ ಲಗತ್ತಿಸಿರುವ ಘೋಷ್ವಾರೆಯನ್ವಯ **4215-MVS** (ಓ&ಎಂ) ಕಾರ್ಯಕ್ರಮದ ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರವು ಹರ್ಷಿಸುತ್ತದೆ.

**2. ಈ ಆದೇಶವು ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.**

ಅ) ಈ ಆದೇಶದಡಿ ಅನುಮೋದನೆಯಾದ ಯೋಜನೆಗೆ ಅಂದಾಜು ಮೊತ್ತದ ವ್ಯಾಪ್ತಿಯೊಳಗೆ ಸಂಬಂಧಪಟ್ಟ ಗ್ರಾ.ಕು.ನೀ&ನೈ. ವೃತ್ತ ರವರಿಂದ ದೃಡೀಕರಿಸಿದ ತಾಂತ್ರಿಕ ಅನುಮೋದನೆಯನ್ವಯ ಪ್ರಗತಿ ಸಾಧಿಸತಕ್ಕದ್ದು.

(ಆ) ಕಾಮಗಾರಿಯ ಪ್ರಾರಂಭದಿಂದ ಅಂತ್ಯದವರೆವಿಗೂ ಭೌತಿಕ ಹಾಗೂ ಆರ್ಥಿಕ ಪ್ರಗತಿಯ ವಿವರಗಳನ್ನು IMISನಲ್ಲಿ ದಾಖಲಿಸತಕ್ಕದ್ದು.

(ಇ) ಸರ್ಕಾರದ ನೀತಿಯನ್ವಯ ಮನೆ ಸಂಪರ್ಕ ಮತ್ತು ಸ್ಟ್ಯಾಂಡ್ ಪೋಸ್ಟ್‌ಗಳಿಗೆ ಕಲ್ಪಿಸಿರುವ ಸಂಪರ್ಕದನ್ವಯ ನಿರ್ವಹಣೆ ವೆಚ್ಚಕ್ಕನುಗುಣವಾಗಿ ಅಗತ್ಯ ನೀರಿನ ಶುಲ್ಕ ಸಂಗ್ರಹಿಸತಕ್ಕದ್ದು ಹಾಗೂ ಮನೆ ಸಂಪರ್ಕಕ್ಕೆ ನೀರಿನ ಠೇವಣಿಯನ್ನು ಗ್ರಾಮ ಪಂಚಾಯತ್ ಠರಾವಿನನ್ವಯ ಸಂಗ್ರಹಿಸುವುದು.

(ಈ) ಸದರಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 2022-23ನೇ ಸಾಲಿನಿಂದ ಮುಂದಿನ 5 ವರ್ಷದವರೆಗೆ ಪರಿಗಣಿಸತಕ್ಕದ್ದು.

(ಉ) ಸದರಿ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯನ್ನು 1 ವರ್ಷದ ಅವಧಿಗೆ ಅಂದಾಜನ್ನು ತಯಾರಿಸಿ, ಟೆಂಡರ್‌ನಲ್ಲಿ ಪ್ರತಿ ವರ್ಷ ಕಾರ್ಯ ನಿರ್ವಹಣೆಯನ್ನು ಪರಿಗಣಿಸಿ, ಗರಿಷ್ಠ 5% ಹೆಚ್ಚುವರಿ ಮೊತ್ತ ಹಾಗೂ 5 ವರ್ಷಗಳ ಗುತ್ತಿಗೆಯನ್ನು ಮುಂದುವರೆಸುವ ಅಂಶಗಳನ್ನು ಅಳವಡಿಸಿಕೊಂಡು KTPP ಕಾಯ್ದೆಯಂತೆ ಕ್ರಮವಹಿಸತಕ್ಕದ್ದು.

(ಊ) ಕಾರ್ಯಾಚರಣೆ ಮತ್ತು ನಿರ್ವಹಣೆ ಕಾಮಗಾರಿಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ:4215-01-102-2-01 ರಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6/12

ನಿರ್ದೇಶಕರು,
ಹಾಗೂ ಪದನಿಮಿತ್ತ ಉಪ ಕಾರ್ಯದರ್ಶಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ -AG/A&E) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-I – G&SSA- AUDIT) ಕರ್ನಾಟಕ, ಬೆಂಗಳೂರು.
3. ಅಧ್ಯಕ್ಷರು, ಜಿಲ್ಲಾ ಪಂಚಾಯತ್, **ಗದಗ.**
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ.ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಮುಖ್ಯ ಅಭಿಯಂತರರು, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.
7. ನಿರ್ದೇಶಕರು, ಶ್ರೀ ಅಬ್ದುಲ್ ನಜೀರ್ ಸಾಬ್ ಗ್ರಾಮೀಣಾಭಿವೃದ್ಧಿ ರಾಜ್ಯ ಸಂಸ್ಥೆ, ಲಲಿತ್ ಮಹಲ್ ರಸ್ತೆ, ಮೈಸೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, **ಗದಗ.**
9. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ ಕಛೇರಿ, **ಬೆಳಗಾವಿ.**
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾ.ಅ.ಮತ್ತು ಪಂ.ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

11. ಸಂಪಾದಕರು, "ಕರ್ನಾಟಕ ವಿಕಾಸ" ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ಬೆಂಗಳೂರು.
12. ಮುಖ್ಯ ಲೆಕ್ಕಾಧಿಕಾರಿ, ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.
13. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, **ಗದಗ.**
14. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.ಮತ್ತು ಪಂ.ರಾಜ್ ಇಲಾಖೆ, (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು) ಬೆಂಗಳೂರು.
15. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ) ಬೆಂಗಳೂರು.
16. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು) ಬೆಂಗಳೂರು.
17. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ: ಗ್ರಾಕುನೀನೈಇ/333/ಗ್ರಾನೀಸ(4)2022, ಬೆಂಗಳೂರು ದಿನಾಂಕ: 05.07.2022 ರ ಅನ್ವಯ

Name of Work : Operation & Maintainance of MVWSS to Adarahalli & Other 37 Villages in Shirahatti Taluk of Gadag District

## ABSTRACT OF O & M ESTIMATE INCLUDING ENERGY CHARGES

| Sl. No. | NAME OF WORKS | TOTAL AMOUNT IN Rs. |
|---|---|---|
| | **PART -A** | |
| 1 | O & M for the year 2022-23 | 21940904.00 |
| | **Sub Total =** | **21940904.00** |
| | Add GST @ 12% | 2632908.48 |
| | Miscellaneous and Rounding Off | 26187.52 |
| | **Grand Total =** | **24600000.00** |
| | **Say Total Amount in Lakhs=** | **246.00** |

"ಅನುಮೋದಿಸಿದೆ"

Director
Rural Drinking Water & Sanitation Dept. &
Ex-Officio Deputy Secretary
Rural Development & Panchayath Raj Dept.

Chief Engineer
Rural Drinking Water & Sanitation Department
2nd Floor, 'E' Block, KHB Complex,
Cauvery Bhavan, K. G. Road, Bangalore-9.